# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವಲಯ

**ವಾರ್ಡ್ ಸಂ ಖ್ಯೆ:110 ಸಂಪಂಗಿರಾಮನಗರ ವಾರ್ಡಿನಲ್ಲಿ ದಿನಾಂಕ:22-12-2020 ರಂದು ನಡೆದ ಸಭೆಯ ನಡವಳಿಗಳು**

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ:21-09-2020 ರ ಆದೇಶದಂತೆ ದಿನಾಂಕ:22-12-2020 ರಂದು ವಾರ್ಡ್ ಸಂಖ್ಯೆ:110 ಸಮಪಂಗಿರಾಮನಗರ, ಹಳೆ ಪಲ್ಲವಿ ಟಾಕೀಸ್ ಪಕ್ಕ, ರಾಜಾರಾಮ್ ಮೋಹನ್‌ರಾಯ್ ರಸ್ತೆ, ಬೆಂಗಳೂರು) ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

## ಸಭೆಗೆ ಹಾಜರಿದ್ದವರು

| ಕ್ರಮ ಸಂಖ್ಯೆ | ಹೆಸರು | ಸಮಿತಿ ಸಭೆಯ |
|---|---|---|
| 1 | ಡಾ.ವಿ,ಶಿವೇಗೌಡ | ಆಧ್ಯಕ್ಷರು /ನೋಡಲ್ ಆರೋಗ್ಯ ವೈದ್ಯಾಧಿಕಾರಿ (ಸಿ.ವಿ.ರಾಮನ್‌ನಗರ ವಿಭಾಗ) |
| 2 | ಶ್ರೀ. ಎಸ್. ನಿರಂಜನ್ | ಕಾರ್ಯದರ್ಶಿ ಸಹಾಯಕ ಅಭಿಯಂತರರು |
| 3 | ಶ್ರೀ.ಚಂದನ್ | ಸಹಾಯಕ ಅಭಿಯಂತರರು |
| 4 | ಶ್ರೀ.ಬಿ.ಎನ್.ಲಕ್ಷ್ಮಿನಾರಾಯಣ | ಕೆಲಸ ಪರಿವೀಕ್ಷಕರು |
| 5 | ಶ್ರೀ ಚನ್ನಪ್ಪಾಜಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB) |
| 6 | ಶ್ರೀ.ಮುನಿರಾಜು | ಸಹಾಯಕ ಅಭಿಯಂತರರು (ಬೆಸ್ಕಾಂ) |
| 7 | ಶ್ರೀ.ಚಿಕ್ಕಣ್ಣ | ಕಿರಿಯ ಅಭಿಯಂತರರು (ಬೆಸ್ಕಾಂ) |
| 8 | ಶ್ರೀ ಎನ್.ಈರಣ್ಣ | ಹಿರಿಯ ಆರೋಗ್ಯ ಪರಿವೀಕ್ಷಕರು |
| 9 | ಶ್ರೀ.ಮನೋಜ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 10 | ಶ್ರೀ.ಬಾಲಕೃಷ್ಣ | ಕಂದಾಯ ಪರಿವೀಕ್ಷಕರು |
| 11 | ಶ್ರೀ.ಕಮಲ್ | ಕಂದಾಯ ವಸೂಲಿಗಾರರು |
| 12 | ಶ್ರೀ.ರಾಯಣ್ಣ | ವಾರ್ಡ್ ಮಾರ್ಷಲ್ |
| 13 | ಶ್ರೀ.ಗೋಪಾಲ್ | ವಾರ್ಡ್ ಮಾರ್ಷಲ್ |
| 14 | ಶ್ರೀಮತಿ.ಲತಗೋಪಾಲಕೃಷ್ಣ | R.W.A |
| 15 | ಶ್ರೀ.ಪ್ರಕಾಶ್ ನಿದ್ದೂಗಡಿ | ಎನ್.ಜಿ.ಓ |
| 16 | ಶ್ರೀ.ಮಣಿ.ಆರ್ | ಕಾರ್ಯಕರ್ತರು |

ದಿನಾಂಕ:22-12-2020 ರಂದು ಬೆಳಿಗ್ಗೆ 10.30 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ. ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ, ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ವಾರ್ಡ್ 110ರ 11ನೇ ಕ್ರಾಸ್ ಸಂಪಂಗಿರಾಮನಗರದಲ್ಲಿ ಖಾಲಿರುವ ಬೆಸ್ಕಾಂ ಬಾಕ್ಸ್‌ನ್ನು ತೆರವುಗೊಳಿಸಲು ಬೆಸ್ಕಾಂ ಅಧಿಕಾರಿಯವರಿಗೆ ನೋಡೆಲ್ ಅಧಿಕಾರಿಯವರು ಸೂಚಿಸಿದರು.

   ಕ್ರಮ :- AEE (BESCOM) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

Scanned by CamScanner

2. ವಾರ್ಡ್ 110 ರ ಕಸಹಾಕುವ ಜಾಗದಲ್ಲಿ ಸಿ.ಸಿ.ಕ್ಯಾಮರಗಳನ್ನು ಅಳವಡಿಸಿಲು ನೋಡೆಲ್ ಅಧಿಕಾರಿಯವರು ಸೂಚಿಸಿದರು.

ಕ್ರಮ :- AEE ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

3. ವಾರ್ಡ್ 110ರಲ್ಲಿ ಸ್ಮಾರ್ಟ್ ಸಿಟಿ ಕಾಮಗಾರಿ ನಡೆಯುತ್ತಿದ್ದು, ಕಾಮಗಾರಿಯ ಎಲ್ಲಾ ವಿವರಗಳನ್ನು ಹಾಗೂ ನಕ್ಷೆಯನ್ನು ಸ್ಮಾರ್ಟ್ ಸಿಟಿ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ತರಲು ಶ್ರೀ.ಪ್ರಕಾಶ್ ನಿದ್ಲೂಗಡಿ ರವರು ನೋಡೆಲ್ ಅಧಿಕಾರಿಯವರಿಗೆ ಕೋರಿದರು.

ಕ್ರಮ :- AEE(smart city ) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

4. ವಾರ್ಡ್ 110ರಲ್ಲಿ ಮುಂದಿನ ಸಭೆಯ ಒಳಗೆ ರಸ್ತೆ ಗುಂಡಿಗಳನ್ನು ಮುಚ್ಚಲು ಶ್ರೀ.ಪ್ರಕಾಶ್ ನಿದ್ಲೂಗಡಿ ರವರು ನೋಡೆಲ್ ಅಧಿಕಾರಿಯವರಿಗೆ ಕೋರಿದರು.

ಕ್ರಮ :- AE ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

5. ವಾರ್ಡ್ 110ರಲ್ಲಿ 8ನೇ ಕ್ರಾಸ್ ಸಂಪಂಗಿರಾಮನಗರದಲ್ಲಿ ಇರುವ ಸಾರ್ವಜನಿಕ ಶೌಚಾಲಯ ಹಾಳಗಿದ್ದು, ಅದನ್ನು ದುರಸ್ಥಿಪಡಿಸಿ ಸಾರ್ವಜನಿಕ ಶೌಚಾಲಯ ನಿರ್ವಹಣೆ ಮಾಡಲು ಶ್ರೀ.ಪ್ರಕಾಶ್ ನಿದ್ಲೂಗಡಿ ರವರು ನೋಡೆಲ್ ಅಧಿಕಾರಿಯವರಿಗೆ ಕೋರಿದರು.

ಕ್ರಮ :- AEE(SWM) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

6. ವಾರ್ಡ್ 110 ರ black spot ಗಳನ್ನು ಒಂದುವಾರದವರೆಗೆ ಪರಿಶೀಲಿಸಿ ಕಸಹಾಕಿದವರಿಗೆ ದಂಡ ಹಾಕಲು ಮಾರ್ಷಲ್‌ಗಳಿಗೆ ನೋಡೆಲ್ ಅಧಿಕಾರಿಯವರು ಸೂಚಿಸಿದರು.

ಕ್ರಮ :- JHI ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

7. ವಾರ್ಡ್ 110ರಲ್ಲಿ ಒಣತ್ಯಾಜ್ಯ ಘಟಕವನ್ನು ತೆರೆಯಲು ಸ್ಥಳದ ತಪಾಸನೆ ಮಾಡುವಂತೆ ಸದರಿ ವಾರ್ಡ್‌ನ ಕಂದಾಯ ಪರೀಕ್ಷಕರಿಗೆ ನೋಡೆಲ್ ಅಧಿಕಾರಿಯವರು ಸೂಚಿಸಿದರು

ಕ್ರಮ :- AEE(SWM) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

8. ವಾರ್ಡ್ 110ರ ಆಯವ್ಯಯಗಳ ಅಂದಾಜು ಪಟ್ಟಿಯನ್ನು ಮುಂದಿನ ಸಭೆಯಲ್ಲಿ ಮಂಡಿಸುವಂತೆ ಸಹಾಯಕ ಅಭಿಯಂತರರಿಗೆ ನೋಡೆಲ್ ಅಧಿಕಾರಿಯವರು ಸೂಚಿಸಿದರು.

ಕ್ರಮ :- EE (SJN) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

9. ವಾರ್ಡ್ 110ರ ಬಿಬಿಎಂಪಿ ಸ್ವತ್ತಿನ ವಿವರಣೆ ಮತ್ತು ಆಸ್ತಿ ತೆರಿಗೆ ವಿವರಗಳನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲು ಕಂದಾಯ ಪರಿವೀಕ್ಷಕರಿಗೆ ನೋಡೆಲ್ ಅಧಿಕಾರಿಯವರು ಸೂಚಿಸಿದರು.

ಕ್ರಮ :- ಕಂದಾಯ ಇಲಾಖೆ (ಶಿವಾಜಿನಗರ) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

10. ವಾರ್ಡ್ 110ರ ಇಂದಿರಾ ಗಾಂಧಿ ರಾಷ್ಟ್ರೀಯ ಪಾರ್ಕ್ ಹತ್ತಿರ ಮರಗಳನ್ನು ತೆರವುಗೊಳಿಸುತ್ತಿರುವ ಬಗ್ಗೆ ಶ್ರೀಮತಿ.ಲತಗೋಪಾಲಕೃಷ್ಣ ರವರು ಸಭೆಯಲ್ಲಿ ಮಂಡಿಸಿದರು. ಇದಕ್ಕೆ ಸಂಬಂಧಿಸಿದ

Scanned by CamScanner

ಶ್ರೀಮತಿ.ಮಂಜುಳ ರವರಿಗೆ ಮುಂದಿನ ಸಭೆಯಲ್ಲಿ ವಿವರಗಳನ್ನು ಸಲ್ಲಿಸಲು ನೋಡಲ್ ಅಧಿಕಾರಿಯವರು ಸೂಚಿಸಿದರು.

ಕ್ರಮ :- ತೋಟಗಾರಿಕೆ ಇಲಾಖೆ ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು

11. ವಾರ್ಡ್ 110ರಲ್ಲಿ ಮೀನಿನ ಅಂಗಡಿಯನ್ನು ತೆರೆವುಗೊಳಿಸಲು ದೇವಾಂಗ ಸಭಾ ಶಾಲೆ ರವರು ದೂರು ನೀಡಿರುವ ಮೇರೆಗೆ ಶ್ರೀ.ಶ್ರೀನಿವಾಸ, ಕಿರಿಯ ಪಶುಪಾಲನೆ ಪರೀವೀಕ್ಷಕರು ವಾರ್ಡ್ ನಂ110 ರವರಿಗೆ ಕ್ರಮವಹಿಸಲು ತಿಳಿಸಿದರು ಸಹ ಕ್ರಮ ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ಸಹಾಯಕ ನಿರ್ದೇಶಕರು ಪಶುಪಾಲನೆ ಇಲಾಖೆ (ಪೂರ್ವ) ವಲಯ ರವರಿಗೆ ತಿಳಿಸಲು ಸಭೆಯ ನಡವಳಿಯನ್ನು ಸಲ್ಲಿಸಲು ಸೂಚಿಸಿದೆ.

ಕ್ರಮ :- ಪಶುವೈದ್ಯಕೀಯ ಇಲಾಖೆ ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು

12. ವಾರ್ಡ್ 110ರಲ್ಲಿ ದಿನಾಂಕ:30-12-2020 ರಂದು ಬೆಳಿಗ್ಗೆ 8.00 ಗಂಟೆಗೆ ಕಮರ್ಷಿಲ್ ಸ್ಟ್ರೀಟ್‌ನಿಂದ ಇಂಬ್ರಾಹಿಂ ಸ್ಟ್ರೀಟ್‌ನವರೆಗೆ ಸ್ವಚ್ಚತಾ ಕಾರ್ಯವನ್ನು ಕೈಗೊಳ್ಳುವಂತೆ ಸೂಚಿಸಿದರು.

ಕ್ರಮ :-AEE (VSN) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವರದಿ ಪೂರ್ಣಗೊಂಡಿರುವ ಬಗ್ಗೆ ಸಭೆಯಲ್ಲಿ ತಿಳಿಸುವುದು. ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಹಿಂದಾ ವೀರೇಶ ಸಹಾಯಕ ಅಭಿಯಂತರರು ಮಧ್ಯಾಹ್ನ 12.00 ವರೆಗೆ ಸಭೆ ಮುಕ್ತಾಯಗೊಳಿಸಲಾಯಿತು.

ವಾರ್ಡ್ ಕಾರ್ಯದರ್ಶಿ
ಸಹಾಯಕ ಅಭಿಯಂತರರು

ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:110, (ಸರ್ವಜ್ಞನಗರ/ರಾಮನಗರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಗಳನ್ನು:

1) ಮಾನ್ಯ ಆಡಳಿತಗಾರರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
2) ಮಾನ್ಯ ಆಯುಕ್ತರು ರವರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ
3) ಮಾನ್ಯ ವಿಶೇಷ ಆಯುಕ್ತರು (ಆಡಳಿತ) ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಿದೆ.
4) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
5) ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
6) ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಸಂತನಗರ ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8) ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9) ಸಹಾಯಕ ಕಂದಾಯ ಅಧಿಕಾರಿ (ವಸಂತನಗರ) ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10) ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೀದಿ ದೀಪ ಪೂರ್ವ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11) ಸಮಿತಿಯ ಎಲ್ಲಾ ಸದಸ್ಯರ ಅವಗಾಹನೆಗೆ ಕಳುಹಿಸಲಾಗಿದೆ.

Scanned by CamScanner